**<u>ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಉಡುಪಿ ಜಿಲ್ಲೆ, ಉಡುಪಿ</u>**

**<u>ಸ್ಪೆಷಲ್ ಕೇಸ್ ನಂಃ 47/2022</u>** <u>ಪಿ.ಡಬ್ಲ್ಯುಃ 2</u>

<u>ಸಿ.ಡಬ್ಲ್ಯುಃ 1</u>

| | |
|---|---|
| ಸಾಕ್ಷಿದಾರರ ಹೆಸರು | ಹರೀಶ್ ಆರ್. |
| ತಂದೆಯ ಹೆಸರು | ರಾಮ ನಾಯ್ಕ |
| ವಯಸ್ಸು | 35 ವರ್ಷ |
| ಉದ್ಯೋಗ | ಪೊಲೀಸ್ ಉಪನಿರೀಕ್ಷಕರು, ಗಂಗೊಳ್ಳಿ ಠಾಣೆ |
| ವಿಳಾಸ | ಗಂಗೊಳ್ಳಿ |

ದಿನಾಂಕಃ 07-04-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ</u>**

1) ನಾನು ದಿನಾಂಕ 11-10-2017 ರಿಂದ 25-08-2020 ರವರೆಗೆ ಕುಂದಾಪುರ ಠಾಣೆಯಲ್ಲಿ ಪೊಲೀಸ್ ಉಪನಿರೀಕ್ಷಕನಾಗಿ ಕೆಲಸ ಮಾಡಿರುತ್ತೇನೆ.

2) ದಿನಾಂಕ ದಿನಾಂಕ 23-08-2020 ರಂದು ನಾನು ಠಾಣೆಯಲ್ಲಿದ್ದಾಗ ಬೆಳಿಗ್ಗೆ 7 ಗಂಟೆಗೆ ಬಾತ್ಮಿದಾರರೊಬ್ಬರು ಫೋನ್ ಮಾಡಿ ವಕ್ವಾಡಿ ಗ್ರಾಮದ ಮೂಡುಗೋಪಾಡಿ ಅಶೋಕ ನಗರ ಎಂಬಲ್ಲಿ ಕೊಟೇಶ್ವರ -ಮೇಪು ಕಡೆಗೆ ಹೋಗುವ ಮಣ್ಣು ರಸ್ತೆಯ ಪೂರ್ವ ಬದಿಯ ಖಾಲಿ ಜಾಗದಲ್ಲಿ ಇಬ್ಬರು ವ್ಯಕ್ತಿಗಳು ನಂಬ್ರ ಪ್ಲೇಟ್ ಇಲ್ಲದ ಯಮಹಾ ಆರ್ ಎಕ್ಸ ಮೋಟಾರ್ ಸೈಕಲ್ ನಿಲ್ಲಿಸಿಕೊಂಡು , ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ಖಚಿತ ಮಾಹಿತಿ ನೀಡಿದ್ದು, ನಾನು ಸದರಿ ಮಾಹಿತಿಯನ್ನು ಠಾಣಾ ದಿನಚರಿಯಲ್ಲಿ ನಮೂದು ಮಾಡಿ, ಈ ಬಗ್ಗೆ ದಾಳಿ ಮಾಡಲು ಮಾಹಿತಿಯನ್ನು ಪೊಲೀಸ್ ಅಧೀಕ್ಷಕರು ಮತ್ತು ಸಹಾಯಕ ಪೊಲೀಸ್ ಅಧೀಕ್ಷಕರು, ಕುಂದಾಪುರ ಇವರಿಗೆ ಕೋರಿಕೆ ಪತ್ರ ಸಲ್ಲಿಸಿರುತ್ತೇನೆ. ಸದರಿ ಕೋರಿಕೆ ಪತ್ರವನ್ನು ಈಗ ನೋಡಿ ಅದನ್ನು ನಿಶಾನೆ ಪಿ-2 ಎಂದು ಗುರುತಿಸಿದೆ. ಸದರಿ ಕೋರಿಕೆ ಮೇರೆಗೆ ಅನುಮತಿ ನೀಡಿದ್ದರು. ಅದಕ್ಕಾಗಿ ಅನುಮತಿಯನ್ನು ಸಹ ನೀಡಿದ್ದರು. ಸದರಿ ಅನುಮತಿಯನ್ನು ಈಗ ನೋಡಿ ಅದನ್ನು ನಿಪಿ-3 ಎಂದು ಗುರುತಿಸಿದ್ದೇನೆ.

3) ನಂತರ ದಾಳಿ ಮಾಡುವ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ಚಾಸಾ -10 ಮತ್ತು 11 ಇವರನ್ನು ಠಾಣೆಗೆ ಕರೆಯಿಸಿಕೊಂಡೆನು. ನಂತರ ಅವರಿಗೆ ವಿಷಯ ತಿಳಿಸಿ, ಅವರಿಗೆ ನಿಪಿ-1 ರ ನೋಟಿಸು ಕೊಟ್ಟಿದ್ದೆ. ನಂತರ ಇಲಾಖಾ ವಾಹನದಲ್ಲಿ ನಾನು, ಪಂಚರು , ಸಿಬ್ಬಂದಿಗಳು ಠಾಣೆಯಿಂದ 8 ಗಂಟೆಗೆ ಠಾಣೆಯಿಂದ ಹೊರಟು ಮಾಹಿತಿ ಬಂದ ಸ್ಥಳ 8-20 ಗಂಟೆಗೆ ತಲುಪಿ, ಸ್ವಲ್ಪ ದೂರದಲ್ಲಿ ವಾಹನವನ್ನು ನಿಲ್ಲಿಸಿ ನೋಡಲಾಗಿ ಆ ಜಾಗೆಯಲ್ಲಿ ಒಂದು ಯಮಹಾ ಆರ್ ಎಕ್ಸ ಮೋಟಾರ್ ಸೈಕಲ್ ನಲ್ಲಿ ಇಬ್ಬರು ವ್ಯಕ್ತಿಗಳು ನಿಂತಿರುವುದು ಕಂಡುಬಂತು. ನಾವು ಮೋಟಾರ್ ಸೈಕಲ್ ಬಳಿ ಹೋದಾಗ ಸಮವಸ್ತ್ರದಲ್ಲಿದ್ದ ನಮ್ಮನ್ನು ಕಂಡು ಇಬ್ಬರು ವ್ಯಕ್ತಿಗಳು ಓಡಿ ಹೋಗಲು ಪ್ರಯತ್ನಿಸಿದ್ದರು. ಅವರನ್ನು ಸಿಬ್ಬಂದಿಯವರ ಸಹಾಯದಿಂದ ಸುತ್ತುವರಿದು, ಹಿಡಿದು ವಿಚಾರಣೆ ಮಾಢಿ ಅವರ ಹೆಸರು, ವಿಳಾಸ ವಿಚಾರಿಸಿದ್ದೆವು. ಅವರನ್ನು ಈದಿನ ನ್ಯಾಯಾಲಯದಲ್ಲಿ ನೋಡಿ ಗುರುತಿಸಿದ್ದೇನೆ.

4) ನಂತರ 1 ನೇ ಆರೋಪಿಯ ಕೈಯಲ್ಲಿದ್ದ ಪ್ಲಾಸ್ಟಿಕ್ ತೊಟ್ಟೆಯಲ್ಲಿ ಏನಿದೆ ಎಂದು ಪ್ರಶ್ನಿಸಿದಾಗ ತೊದಲುತ್ತಾ ಮಾತ್ರೆ ಮತ್ತು ಔಷಧಿ ಇರುವುದಾಗಿ ತಿಳಿಸಿದ್ದು, ಅನುಮಾನಕೊಂಡು ನಂತರ ಕೂಲಂಕುಶವಾಗಿ ಪ್ರಶ್ನಿಸಿದಾಗ ಗಾಂಜಾ ಇರುವುದಾಗಿ ತಿಳಿಸಿದನು. ಅದಕ್ಕಾಗಿ ಅವರ ಅಂಗ ಶೋಧನೆಗಾಗಿ ಪ್ರತ್ಯೇಕ ನೋಟಿಸು ನೀಡಿದ್ದೆ. ಸದರಿ ನೋಟಿಸುಗಳನ್ನು ಈಗ ನೋಡಿ ಅವುಗಳನ್ನು ನಿಶಾನೆ ಪಿ- 4 ಮತ್ತು 5 ಎಂದು ಗುರುತಿಸಿದೆ. ಆಗ ಆರೋಪಿತರು ತಮ್ಮ ಶೋಧನೆ ಪತ್ರಾಂಕಿತ ಅಧಿಕಾರಿಯಿಂದ ಆಗಬೇಕೆಂದು ಬರೆದು, ಸಹಿ ಮಾಡಿ ಕೊಟ್ಟಿರುತ್ತಾರೆ, ಆ ಭಾಗವನ್ನು ಈಗ ನೋಡಿ ನಿಪಿ-4(ಎ) ಮತ್ತು 5(ಎ) ಎಂದು ಗುರುತಿಸಿದೆ.

5) ಕೂಡಲೇ ಚಾಸಾ-14, ದಂಡಾಧಿಕಾರಿಯವರಿಗೆ ಸಿಬ್ಬಂದಿಯೊಂದಿಗೆ ಬರಲು ಕೋರಿಕೆ ಸಲ್ಲಿಸಿದ್ದೆ. ಆ ಕೋರಿಕೆಯನ್ನು ಈಗ ನೋಡಿ ಅದನ್ನು ನಿಶಾನೆ ಪಿ-6 ಎಂದು ಗುರುತಿಸಿದೆ. ಅದರಂತೆ ಚಾಸಾ-14 ಇವರು ಆ ಜಾಗೆಗೆ 10-30 ಗಂಟೆಗೆ ಬಂದಿದ್ದರು. ಅದೇ ಸಮಯ ಚಾಸಾ-12 ಇವರೊಂದಿಗೆ ತೂಕದ ಸಾಧನ ತರಿಸಿತ್ತು. ಚಾಸಾ -14 ಇವರು ತಕ್ಷಣವೇ ಮಾದಕ ವಸ್ತುಗಳಿಗಾಗಿ ನಮ್ಮ ಅಂಗ ಶೋಧನೆ

ಮಾಡಿ, ನಮ್ಮ ಬಳಿಯಲ್ಲಿ ಯಾವುದೇ ಮಾದಕ ವಸ್ತುಗಳು ಇಲ್ಲ ಎಂದು ಖಚಿತಪಡಿಸಿಕೊಂಡು , ಅರೋಪಿತರನ್ನು ವಿಚಾರಿಸಿದ್ದರು.

6) ಪ್ರಥಮವಾಗಿ 1 ನೇ ಆರೋಪಿಯ ಅಂಗ ಶೋಧನೆ ಮಾಡಿದಾಗ, ಆತನ ಬಳಿ ಇದ್ದ ಪ್ಲಾಸ್ಟಿಕ್ ತೊಟ್ಟೆ ಇತ್ತು. ಅದನ್ನು ತೆಗೆದು ನೋಡಿದಾಗ ಅದರಲ್ಲಿ ಗಾಂಜಾ ಇರುವುದನ್ನು ಖಚಿತಪಡಿಸಿಕೊಂಡು, ಆ ತೊಟ್ಟೆಯನ್ನು ಚಾಸಾ-12 ಇವರು ತಂದಿದ್ದ ತೂಕದ ಸಾಧನದಲ್ಲಿ ತೂಕ ಮಾಡಿದಾಗ ಅದು 1 ಕೆಜಿ 105 ಗ್ರಾಂ ಇತ್ತು. ಅದನ್ನು ಅದೇ ಪ್ಲಾಸ್ಟಿಕ್ ತೊಟ್ಟೆಯಲ್ಲಿ ಇರಿಸಿ, ಬಿಳಿ ಬಟ್ಟೆ ಯಿಂದ ಸುತ್ತಿ, ಹೊಲಿದು, ಎಸ್.ಹೆಚ್.ಓ ಎನ್ನುವ ಅರಗುಸೀಲು ಮಾಡಿ, ಪಂಚರ, ತಾಲೂಕುದಂಡಾಧಿಕಾರಿಯವರ ಸಹಿ ಇರುವ ಚೀಟಿ ಅಂಟಿಸಿ, ಎ ಎಂದು ಗುರುತಿಸಲಾಯಿತು.

7) ನಂತರ 1 ನೇ ಅರೋಪಿಯ ಅಂಗ ಶೋಧನೆ ಮಾಡಿದಾಗ ಆತನ ಕಿಸೆಯಲ್ಲಿ ನಗದು ಹಣ 1290.00 ಮತ್ತು ಒಂದು ಬಿಳಿ ಬಣ್ಣದ ರೆಡ್ ಮೀ ಮೊಬೈಲ್ ಸಿಕ್ಕಿತ್ತು. ಅವುಗಳನ್ನು ಚಾಸಾ-14 ಇವರಿಂದ ಪಡೆದು, ನಾನು ಜಪ್ತು ಮಾಡಿದ್ದೆ.

8) ನಂತರ ಚಾಸಾ-14 ರವರು 2 ನೇ ಅರೋಪಿಯ ಅಂಗ ಶೋಧನೆ ಮಾಡಿದಾಗ ಆತನ ಪ್ಯಾಂಟಿನ ಕಿಸೆಯಲ್ಲಿದ್ದ 590.00 ನಗದು ಹಣ, ಮತ್ತು ಕೆಂಪು ಬಣ್ಣದ ಒಪ್ಪೋ ಮೊಬೈಲ್ ನ್ನು ತೆಗೆದು ಚಾಸಾ -14 ಇವರು ಪಡೆದು, ನನಗೆ ಕೊಟ್ಟಿದ್ದರು. ಆ ಹಣದ ಬಗ್ಗೆ ಅವರನ್ನು ವಿಚಾರಿಸಿದಾಗ ಆ ಹಣ ಗಾಂಜಾ ಮಾರಾಟದಿಂದ ಬಂದ ಹಣ ಎಂದು ಹೇಳಿದ್ದರು. ನಂತರ ಗಾಂಜಾದ ಬಗ್ಗೆ ವಿಚಾರಿಸಿದಾಗ ಸದರಿ ಗಾಂಜಾವನ್ನು ಆರೋಪಿತರು ಇಬ್ಬರು ಶಿವಮೊಗ್ಗದ ಹೊಸನಗರದಿಂದ ಪಡೆದು ತಂದಿದ್ದು, ಸದರಿ ಪರಿಸರದಲ್ಲಿ ಮಾರಾಟ ಮಾಡಲು ನಿಂತಿರುವುದಾಗಿ ತಿಳಿಸಿದ್ದರು. ಆದ್ದರಿಂದ ಅವರನ್ನು ಅಲ್ಲಿಯೇ ಮೋಟಾರ್ ಸೈಕಲ್ ನೊಂದಿಗೆ ದಸ್ತಗಿರಿ ಮಾಡಿದ್ದೆ. ಅದಕ್ಕಾಗಿ ಅಲ್ಲಿಯೇ ಪಂಚನಾಮೆಯನ್ನು ಸಹ ಬರೆದಿತ್ತು. ಪೋಟೋವನ್ನು ಸಹ ತೆಗೆದಿತ್ತು. ಸದರಿ ಪಂಚನಾಮೆಯನ್ನು ಈಗ ನೋಡಿ ಅದನ್ನು ನಿಶಾನೆ ಪಿ-7 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ-7(ಎ)

ಎಂದು ಗುರುತಿಸಿದ್ದೇನೆ. ಆಗ ತೆಗೆದ ಪೋಟೋವನ್ನು ಈಗ ನೋಡಿ ನಿಶಾನೆ ಪಿ-8 ಎಂದು, ಆ ಸಮಯದಲ್ಲಿ ಜಪ್ತಾದ ಗಾಂಜಾದ ಮೇಲೆ ಹಾಕಿದ್ದ ಮುದ್ರೆಯ ಮಾದರಿಯನ್ನು ಸಹ ತೆಗೆದಿತ್ತು. ಸದರಿ ಮಾದರಿ ಮುದ್ರೆಯನ್ನು ಈಗ ನೋಡಿ ನಿಶಾನೆ ಪಿ-9 ಎಂದು, ಸದರಿ ಮಾದರಿ ಮುದ್ರೆಗಳ ಪ್ರತಿಗಳನ್ನು ಚಾಸಾ-10 ಮತ್ತು 11 ಇವರಿಗೆ ಕೊಟ್ಟಿದ್ದು, ಅದಕ್ಕಾಗಿ ಅವರು ಬರೆದು ಕೊಟ್ಟ ರಶೀತಿಯನ್ನು ಈದಿನ ನೋಡಿ ನಿಶಾನೆ ಪಿ-10 ಎಂದು ಗುರುತಿಸಿದ್ದೇನೆ. ನಿಪಿ-7 ರಲ್ಲಿ ಇರುವ ಸಹಿಗಳನ್ನು ಗುರುತಿಸಬಲ್ಲೆ.

9) ನಿಪಿ-7 ನ್ನು ದಾಖಲಿಸಿದ ನಂತರ ವರದಿಯೊಂದನ್ನು ಠಾಣಾಧಿಕಾರಿಗೆ ಕಳುಹಿಸಿಕೊಟ್ಟಿದ್ದೆ. ಸದರಿ ವರದಿಯನ್ನು ಈಗ ನೋಡಿ ನಿಶಾನೆ ಪಿ-11 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ-11(ಎ) ಎಂದು ಗುರುತಿಸಿದ್ದೇನೆ. ಸದರಿ ವರದಿಯ ಆಧಾರದಿಂದ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ತಿಳಿದು ಕೊಂಡು ನಿಪಿ-7 ರ ಜಾಗೆಯಲ್ಲಿ ಆರೋಪಿತರ ಮೇಲೆ ದಸ್ತಗಿರಿ ಕ್ರಮವನ್ನು ಜರುಗಿಸಿದ್ದೆ. ಆ ಸಮಯದಲ್ಲಿ ಬರೆದ ಪಂಚನಾಮೆಯನ್ನು ಈಗ ನೋಡಿ ನಿಶಾನೆ ಪಿ-12 ಎಂದು, ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ನಿಪಿ-12(ಎ) ಎಂದು ಗುರುತಿಸಿದ್ದೇನೆ. ನಂತರ ವಶಪಡಿಸಿಕೊಂಡ ಸ್ವತ್ತುಗಳು, ಆರೋಪಿತರೊಂದಿಗೆ ಠಾಣೆಗೆ ಬಂದು, ಜಪ್ತಾದ ಮುದ್ದೆಮಾಲುಗಳಿಗಾಗಿ ಮು.ಮಾ. ವರದಿ ಬರೆದಿದ್ದೇನೆ. ನಂತರ ಆರೋಪಿತರ ಸ್ವಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಹಾಗೂ ದಾಳಿಗೆ ಸಹಕರಿಸಿದ ಚಾಸಾ-2 ರಿಂದ 12 ಮತ್ತು 14 ಇವರ ಹೇಳಿಕೆಯನ್ನು ಪಡೆದಿದ್ದೇನೆ. ನಂತರ ಆರೋಪಿತರ ವೈಧ್ಯಕೀಯ ಪರೀಕ್ಷೆ ಮಾಡಿ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ. ನಂತರ ಈ ಬಗ್ಗೆ ವಿವರವಾದ ತನಿಖೆಯ ವರದಿಯನ್ನು ಪೊಲೀಸ್ ಅಧೀಕ್ಷಕರಿಗೆ ಸಲ್ಲಿಸಿರುತ್ತೇನೆ. ಸದರಿ ವರದಿಯನ್ನು ಈಗ ನೋಡಿ ಅದನ್ನು ನಿಶಾನೆ ಪಿ-13 ಎಂದು ಗುರುತಿಸಿದ್ದೇನೆ.

10) ಆದಿನ ನಾನು ಆರೋಪಿತರಿಂದ ವಶಪಡಿಸಿಕೊಂಡಿದ್ದ ಹಣ ಮತ್ತು ಮೊಬೈಲ್ ಗಳನ್ನು ನೋಡಿದರೆ ಗುರುತಿಸಬಲ್ಲೆ. 1 ನೇ ಆರೋಪಿಯಿಂದ ಜಪ್ತಾದ 1290.00 ಹಾಗೂ 2 ನೇ ಆರೋಪಿಯಿಂದ ಜಪ್ತಾದ 590.00, ಒಟ್ಟು ಹಣ 1880.00 ಇವುಗಳನ್ನು **ಎಂಒ-1** ಎಂದು, 1 ನೇ ಅರೋಪಿಯ ಬಿಳಿ ಬಣ್ಣದ ರೆಡ್

ಮೀ ಮೊಬೈಲ್ ನ್ನು ಈಗ ನೋಡಿ ಅದನ್ನು **ಎಂಒ-2** ಎಂದು, 2 ನೇ ಆರೋಪಿಯ ಕೆಂಪು ಬಣ್ಣದ ಒಪ್ಪೋ ಮೊಬೈಲ್ ನ್ನು **ಎಂಒ-3** ಎಂದು ಗುರುತಿಸಿದೆ. ನಿಪಿ-8 ರ ಪೋಟೋದಲ್ಲಿ ನಾನು ವಶಪಡಿಸಿಕೊಂಡಿದ್ದ ಮೋಟಾರ್ ಸೈಕಲ್, ಸ್ವತ್ತುಗಳು ಕಂಡುಬರುತ್ತವೆ. ನಂತರ ನನಗೆ ವರ್ಗಾವಣೆಯಾಗಿದ್ದರಿಂದ ಈ ಪ್ರಕರಣದ ಕಡತವನ್ನು ಚಾಸಾ-17 ಇವರಿಗೆ ವಹಿಸಿದ್ದೆ.

**<u>ಪಾಟೀಸವಾಲುಃ ಆರೋಪಿತರ ಪರ ಶ್ರೀ ಇ.ಬಿ.ಆರ್. ವಕೀಲರು ಚಾಸಾ-10 , 11 ಇವರ ವಿಚಾರಣೆಯ ನಂತರ ಮಾಡುವುದಾಗಿ ಹೇಳಿದ್ದರಿಂದ ಮುಂದೂಡಲಾಗಿದೆ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.